ಹೆಲಿಕ್ಯಾಪ್ಟರ್ ಬಿಡಿ ಭಾಗಗಳ ತಯಾರಿಕಾ ಘಟಕಕ್ಕಾಗಿ ಭೂ ಮಂಜುರಾತಿ

76 : (133)

ಶ್ರೀ ಪ್ರಭು ಚೌವ್ಹಾಣ್ (ಔರಾದ್)

ಅ) ಬೀದರ್ ಜಿಲ್ಲೆಯಲ್ಲಿ ಹೆಲಿಕ್ಯಾಪ್ಟರ್ ಬಿಡಿ ಭಾಗಗಳ ತಯಾರಿಕಾ ಘಟಕಕ್ಕಾಗಿ ಭೂ ಮಂಜುರಾತಿಯನ್ನು ನೀಡಲು ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮವೇನು (ಸಂಪೂರ್ಣ ವಿವರ ನೀಡುವುದು)?

ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)

ಅ) ಇದೆ

ಆ) ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಸಂಧ್ಯಾ ಸುರಕ್ಷಾ – ವೃದ್ಧಾಪ್ಯ, ವಿಧವಾ ಮತ್ತು ಅಂಗವಿಕಲರ ವೇತನ, ಯೋಜನೆಗಳು.

45 (158)

ಶ್ರೀ ಬಂಡೆಪ್ಪ ಖಾಶೆಂಪೂರ್ ವಿಧಾನ ಸಭೆ ಸದಸ್ಯರು (ಬೀದರ್ ದಕ್ಷಿಣ)

ಅ) ಬೀದರ್ ದಕ್ಷಿಣ ವಿಧಾನ ಸಭಾ ಕ್ಷೇತ್ರದಲ್ಲಿ ಇದುವರೆವಿಗೂ ಸಂಧ್ಯಾ ಸುರಕ್ಷಾ – ವೃದ್ಧಾಪ್ಯ, ವಿಧವಾ ಮತ್ತು ಅಂಗವಿಕಲರ ವೇತನ, ಯೋಜನೆಗಳಲ್ಲಿ ಆಯ್ಕೆ ಮಾಡಲಾಗಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; (ಯೋಜನವಾರು ವಿವರಗಳನ್ನು ನೀಡುವುದು)

ಆ) ಈ ಯೋಜನೆಗಳ ವೇತನದ ಡಾಟಾ ಶೀಟ್‌ಗಳ ಮೂಲಕ ತಪಾಸಣೆ ಮಾಡಿ ತಿರಸ್ಕರಿಸುತ್ತಿರುವ ಫಾಲಾನುಭವಿಗಳ ಸಂಖ್ಯೆ ಎಷ್ಟು ಹಾಗೂ ತಿರಸ್ಕರಿಸಲು ಕಾರಣಗಳೇನು;

ಇ) ಇದರಿಂದಾಗಿ ಅನೇಕ ನಿಜವಾದ ಫಲಾನುಭವಿಗಳಿಗೆ ಅನ್ಯಾಯವಾಗಿ ತೀವ್ರ ಆರ್ಥಿಕ ತೊಂದರೆಯಿಂದಾಗಿ ಅಸಹಾಯಕತೆಯಿಂದ ಸಂಕಷ್ಟದ ಜೀವನ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಇಂತಹ ಪ್ರಕರಣಗಳನ್ನು ಪುನರ್ ಪರಿಶೀಲಿಸುವ ಮೂಲಕ ನಿಜವಾದ ಫಲಾನುಭವಿಗಳಿಗೆ ನ್ಯಾಯ ದೊರಕಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)

ಅ) ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಆಯ್ಕೆ ಮಾಡಲಾದ ಫಲಾನುಭವಿಗಳ ಸಂಖ್ಯೆ ವಿವರ

ಕ್ರ.ಸಂ.	ಯೋಜನೆ	ಫಲಾನುಭವಿಗಳ ಸಂಖ್ಯೆ
1	ವೃದ್ಧಾಪ್ಯ ವೇತನ	6154
2	ವಿಧವಾ ವೇತನ	4962
3	ಅಂಗವಿಕಲ	4285
4	ಸಂಧ್ಯಾ ಸುರಕ್ಷಾ	9296
	ಒಟ್ಟು	**24697**

ಆ) ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 8956 ಫಲಾನುಭವಿಗಳನ್ನು ತಿರಸ್ಕೃತ ಮಾಡಲಾಗಿದೆ.

ಮರಣ, ವಲಸೆ, ನಿಗದಿ ಪಡಿಸಿರುವ ಮಿತಿಗಿಂತ ಆದಾಯ ಹೆಚ್ಚಿಗೆ, ಒಂದಕ್ಕಿಂತ ಹೆಚ್ಚಿಗೆ ಪಿಂಚಣಿ ಪಡೆಯುತ್ತಿರುವುದರಿಂದ ಹಾಗೂ ನಕಲಿ ಹೆಸರಿನಿಂದ ಪಿಂಚಣಿ ಪಡೆಯುತ್ತಿರುವುದರಿಂದ ತಿರಸ್ಕರಿಸಲಾಗಿದೆ.

ಇ) ವಿವಿಧ ಸಾಮಾಜಿಕ ಭದ್ರತಾ ಯೋಜನೆಯಡಿ ಕೆಲವು ಅರ್ಹ ಫಲಾನುಭವಿಗಳಿಗೆ ಕಾರಣಾಂತರಗಳಿಂದ ಪಿಂಚಣಿ ರದ್ದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಈ) ಸರ್ಕಾರಿ ಸುತ್ತೋಲೆ ಸಂಖ್ಯೆ : ಆರ್‌ಡಿ 106 ಡಿಎಸ್‌ಪಿ 2011 ಬೆಂಗಳೂರು, ದಿನಾಂಕ : 06.01.2012 ರನ್ವಯ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಭೌತಿಕ ಪರಿಶೀಲನಾ ಕಾರ್ಯದ ಸಂದರ್ಭದಲ್ಲಿ ಕಾರಣಾಂತರದಿಂದ ಅರ್ಹ ಫಲಾನುಭವಿಗಳ ಪಿಂಚಣಿಯನ್ನು ರದ್ದು ಮಾಡಿದ ಸಂದರ್ಭದಲ್ಲಿ ನಿರ್ದೇಶಿತ ವಿಧಿವಿಧಾನಗಳಂತೆ ಪುನಃ ಆರಂಭಿಸಲು ಆದೇಶಿಸಲಾಗಿದೆ.

ಗುತ್ತಿಗೆ ನೌಕರರು

93 : (134)

ಶ್ರೀ ಕೆ. ವೆಂಕಟೇಶ್ (ಪಿರಿಯಾಪಟ್ಟಣ)

ಅ) ಸಚಿವಾಲಯದಲ್ಲಿ ಗುತ್ತಿಗೆ ನೌಕರರಾಗಿ ಸೇವೆ ಸಲ್ಲಿಸುತ್ತಿರುವವರನ್ನು ಖಾಯಂಗೊಳಿಸಲು ದಿನಾಂಕ 01.06.1994 ರಿಂದ 01.06.2004 ರವರೆಗಿನ ಅವಧಿಯಲ್ಲಿ 2400 ದಿವಸಗಳ ಸೇವೆ ಹಾಗೂ